ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್, ಹಾಸನ

## ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಪದ್ಮಶ್ರೀ ಕಮರ್ಷಿಯಲ್ ಕಾಂಪ್ಲೆಕ್ಸ್ , ಹೋಟೆಲ್ ಪಾಲಿಕ ಹತ್ತಿರ, ಆರ್.ಸಿ.ರೋಡ್, ಹಾಸನ-573201

E-Mail:dobcmhassan@gmail.com ☎ Fax/Phone No:08172-268372

ಸಂಖ್ಯೆಹಿಂವಕಇ/ಸಿಬ್ಬಂದಿ-3/ಗ್ರೂಪ್-ಡಿ/ನೆ.ನೇ-1/2016-17 ದಿನಾಂಕ:12-01-2018

**ತಿಳುವಳಿಕೆ ಪತ್ರ**

**ನೊಂದಾಯಿತ ಅಂಚೆ ಮೂಲಕ**

**ವಿಷಯ:-** ಹಾಸನ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಅಡುಗೆಯವರು ಮತ್ತು ಅಡುಗೆ ಸಹಾಯಾಕರ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವ ಕುರಿತು.

**ಉಲ್ಲೇಖ:-**
1. ಈ ಕಛೇರಿ ತಿಳುವಳಿಕೆ ಪತ್ರ ಸಂಖ್ಯೆ:ಹಿಂವಕಇ/ಸಿಬ್ಬಂದಿ-03/ಗ್ರೂಪ್-ಡಿ ನೇ.ನೇ/ಸಿ.ಆರ್-01/2016-17 ದಿನಾಂಕ:18-08-2017 ಮತ್ತು 11-10-2017.
2. ಸರ್ಕಾರದ ಆದೇಶ ಸಂಖ್ಯೆ:ಹಿಂವಕ 12 ಬಿಇಟಿ 2018 ಬೆಂಗಳೂರು ದಿನಾಂಕ: 08-01-2018.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹಾಸನ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಅಡುಗೆಯವರ ಮತ್ತು ಅಡುಗೆ ಸಹಾಯಕರ ಹುದ್ದೆಗೆ ಆಯ್ಕೆಯಾಗಿರುವ, ಅಭ್ಯರ್ಥಿಗಳ ನೇರ ನೇಮಕಾತಿಯ ಮಾರ್ಗಸೂಚಿಯಂತೆ ಸಂಬಂಧಿಸಿದ ಮೂಲದಾಖಲಾತಿಗಳನ್ನು ಪರಿಶೀಲಿಸಲಾಗಿರುತ್ತದೆ. ಅಂತಿಮವಾಗಿ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಹಿನ್ನಲೆಯಲ್ಲಿ ಆಯ್ಕೆ ಪಟ್ಟಿಯ ಜೇಷ್ಠತೆ ಆಧಾರಿತ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸುವ ಸಂಬಂಧ ಉಲ್ಲೇಖ(2)ರಲ್ಲಿ ಸರ್ಕಾರದಿಂದ ನಿರ್ದೇಶನ ನೀಡಲಾಗಿರುತ್ತದೆ.

ಅದರಂತೆ, **ಡಾ॥ ಅಂಬೇಡ್ಕರ್ ಭವನ, ಹರ್ಷಮಹಲ್ ರಸ್ತೆ, ಹಾಸನ ಜಿಲ್ಲೆ, ಹಾಸನ** ಇಲ್ಲಿ ಕೆಳಕಂಡಂತೆ ನಿಗಧಿ ಪಡಿಸಲಾಗಿರುವ ದಿನಾಂಕದಂದು ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು, ಗ್ರೂಪ್-ಡಿ ವೃಂದದ ನೇರ ನೇಮಕಾತಿ ಸಮಿತಿ ಹಾಸನ ಮತ್ತು ಸಮಿತಿಯ ಸದಸ್ಯರುಗಳ ಸಮ್ಮುಖದಲ್ಲಿ ಅಂತಿಮ ಆಯ್ಕೆ ಪಟ್ಟಿಯ ಜೇಷ್ಠತೆ ಆಧಾರಿತ ಕೌನ್ಸಿಲಿಂಗ್ ಮಾಡಲಾಗುವುದು. ಸದರಿ ದಿನದಂದು ಅಡುಗೆಯವರ ಮತ್ತು ಅಡುಗೆ ಸಹಾಯಕರ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಾಗಿ, ಸ್ಥಳ ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ. ಸದರಿ ದಿನಾಂಕದಂದು ಗೈರು ಹಾಜರಾದಲ್ಲಿ ಅಥವಾ ನಿಗಧಿತ ಸಮಯಕ್ಕೆ ಬಾರದಿದ್ದಲ್ಲಿ ಜೇಷ್ಠತೆ ಪಟ್ಟಿಯಿಂದ ಕೈಬಿಟ್ಟು ಮುಂದಿನ ಅಭ್ಯರ್ಥಿಗೆ ಅವಕಾಶ ಮಾಡಿಕೊಡಲಾಗುವುದು ಎಂದು ಎಲ್ಲಾ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಈ ಮೂಲಕ ತಿಳಿಸಲಾಗಿದೆ.

**ವಿಶೇಷ ಸೂಚನೆ: ಅಭ್ಯರ್ಥಿಗಳು 4 ಪಿ.ಪಿ ಸೈಜ್‌ನ ಭಾವಚಿತ್ರ ತರವುದು.**

| ಕ್ರ.ಸಂ | ದಿನಾಂಕ | ಹುದ್ದೆಯ ಹೆಸರು | ಕೌನ್ಸಿಲಿಂಗ್ ಸಮಯ |
|---|---|---|---|
| 1. | 18-01-2018 | ಅಡುಗೆಯವರು/ಅಡುಗೆ ಸಹಾಯಕರು | ಬೆಳಿಗ್ಗೆ 10.00 ಗಂಟೆ |

ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಹಾಸನ ಜಿಲ್ಲೆ ಹಾಸನ.

ಗೆ,

k-drive/srsir/grpd/nicnew/letter/bcm8-8-2017